ಡಾ: ಹೆಚ್.ಸಿ. ಮಹದೇವಪ್ಪ :— ಏಪ್ರಿಲ್‌ನಲ್ಲಿಯೇ ವೆರಿಫೈ ಮಾಡಿ ಮೇ ತಿಂಗಳಿನಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಆರ್. ಶ್ರೀನಿವಾಸ್ :— ಕಳೆದ ಅಧಿವೇಶನದಲ್ಲಿಯೂ ಕೂಡ ಇದೇ ರೀತಿ ನೀವು ಹೇಳಿದ್ದಿರಿ. ಆದರೆ ಇನ್ನೂ ಕೂಡ ಅದು ಕಾರ್ಯರೂಪಕ್ಕೆ ಬಂದಿಲ್ಲ. ಕನಿಷ್ಠಪಕ್ಷ ಏಪ್ರಿಲ್ ತಿಂಗಳಲ್ಲಿ ಮಾಡುತ್ತೇವೆಂದು ಅಧ್ಯಕ್ಷರ ಮುಖಾಂತರ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ :— ಏಪ್ರಿಲ್ ತಿಂಗಳಲ್ಲಿ ಟೆಂಡರ್ ಮಾಡುತ್ತಿದ್ದೇವೆ.

ಲಿಂಗಸೂಗೂರಿಗೆ 100 ಹಾಸಿಗೆಯ ಆಸ್ಪತ್ರೆಯ ಕಟ್ಟಡ ನಿರ್ಮಾಣ.

149(1093) ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸೂಗೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸೂಗೂರಿನ 100 ಹಾಸಿಗೆಯ ಆಸ್ಪತ್ರೆಯ ಕಾಮಗಾರಿಗಾಗಿ ಸರ್ಕಾರವು ಒದಗಿಸಿದ ಹಣವೆಷ್ಟು?

ಆ) ಸದರಿ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು ಮತ್ತು ಪೂರ್ಣಗೊಳಿಸಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಲಿಂಗಸೂಗೂರಿನ ಸದ್ಯದ 50 ಹಾಸಿಗೆಗಳ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ಜರ್ಮನ್ ನೆರವಿನ ಕೆಎಫ್‌ಡಬ್ಲ್ಯೂ ಯೋಜನೆಯ ಮೊದಲನೆಯ ಹಂತದಲ್ಲಿ ಸೇರ್ಪಡೆಯಾಗಿದೆ ಆಸ್ಪತ್ರೆಯ ಕಟ್ಟಡದ ನವೀಕರಣ ಹಾಗೂ ವಿಸ್ತರಣೆಯ ಕಾಮಗಾರಿಗಾಗಿ ರೂ. 79.35 ಲಕ್ಷ ನಿಗದಿಪಡಿಸಿಲಾಗಿದೆ.

ಆ) ಕಾಮಗಾರಿಯ ಪ್ರಾರಂಭಿಕ ನಕ್ಷೆಯ ಜರ್ಮನ್ ಸಲಹೆಗಾರ ವಾಸ್ತು ಶಿಲ್ಪಿ ತಜ್ಞರಿಂದ ಅನುಮೋದಿತವಾಗಿದ್ದು, ಕೆಎಫ್‌ಡಬ್ಲ್ಯೂ ಸಂಸ್ಥೆಗೆ ಅನುಮೋದನೆಗಾಗಿ ಕಳುಹಿಸಿಕೊಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅನುಮೋದನೆ ದೊರೆತ ನಂತರ ಅಂತಿಮ ನಕ್ಷೆ ಮತ್ತು ಅಂದಾಜನ್ನು ತಯಾರಿಸಿ ಟೆಂಡರುಗಳನ್ನು ಕರೆಯಲು ಕ್ರಮ ತೆಗೆದುಕೊಳ್ಳಲಾಗುವುದು. ಟೆಂಡರುಗಳ ಮತಾಲ್ಯ ಮಾಪನದ ನಂತರ ಅನುಮೋದನೆ ಪಡೆದು ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿ ಪ್ರಾರಂಭಿಸಲಾಗುವುದು. ಕಾಮಗಾರಿ ಪ್ರಾರಂಭವಾದ ದಿನಾಂಕದಿಂದ 18 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.